ಕರ್ನಾಟಕ ಲೋಕ ಸೇವಾ ಆಯೋಗ

ಸಂಖ್ಯೆ: ಇ(1) 3639/2020-21/ಪಿಎಸ್ಸಿ ದಿನಾಂಕ:23-11-2020

ಅಧಿಸೂಚನೆ

2017-18 ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿಯ ಮುಖ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಸೂಚನೆಗಳು

ಆನ್ ಲೈನ್ ನಲ್ಲಿ ಅರ್ಜಿ ಭರ್ತಿ ಮಾಡುವ ಪ್ರಾರಂಭದ ದಿನಾಂಕ	25-11-2020
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	10-12-2020
ಶುಲ್ಕ ಪಾವತಿಸಲು ಕೊನೆಯ ದಿನಾಂಕ	11-12-2020
ಅರ್ಜಿಯ ಪ್ರಿವ್ಯೂವನ್ನು Download ಮಾಡಿಕೊಂಡು ಸ್ವಯಂ ದೃಢೀಕರಿಸಿದ ಎಲ್ಲಾ ಪ್ರಮಾಣ ಪತ್ರಗಳ ಪ್ರತಿಗಳನ್ನು (ದ್ವಿಪ್ರತಿಯಲ್ಲಿ) ಅರ್ಜಿಯೊಂದಿಗೆ ಲಗತ್ತಿಸಿ, ಆಯೋಗಕ್ಕೆ ಖುದ್ದಾಗಿ ಅಥವಾ ಸ್ಪೀಡ್ ಪೋಸ್ಟ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ	15-12-2020

1. ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇಮಕಾತಿ) ನಿಯಮಗಳು, 1997 ಮತ್ತು ಕಾಲಾಕಾಲಕ್ಕೆ ತಿದ್ದುಪಡಿಯಾದ ನಿಯಮಗಳನ್ವಯ ಅಧಿಸೂಚನೆ ಸಂಖ್ಯೆ :ಪಿಎಸ್ಸಿ (1) ಇ(1)-ಜಿಪಿ/2020 ದಿನಾಂಕ:31-01-2020; ಸೇರ್ಪಡೆ ಅಧಿಸೂಚನೆ ಸಂಖ್ಯೆ ಇ(1) 3099/ 2019-20/ಪಿಎಸ್ಸಿ ದಿನಾಂಕ: 24-02-2020 ಹಾಗೂ ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಇ(1) 3100/2019-20/ಪಿಎಸ್ಸಿ, ದಿ:25-02-2020ರಲ್ಲಿ ಹೇಳಿರುವ ಸೇವೆಗಳು ಮತ್ತು ಹುದ್ದೆಗಳಿಗೆ ದಿನಾಂಕ:24-08-2020ರಂದು ಪೂರ್ವಭಾವಿ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. ದಿನಾಂಕ: 23-10-2020ರಂದು 1:20 ಅನುಪಾತದಲ್ಲಿ ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಮುಖ್ಯ ಪರೀಕ್ಷೆಯನ್ನು ದಿನಾಂಕ: 13-02-2021 ರಿಂದ 16-02-2021 ರವರೆಗೆ ನಡೆಸಲು ಉದ್ದೇಶಿಸಲಾಗಿದೆ.

2. ಅಭ್ಯರ್ಥಿಗಳು ಆನ್ ಲೈನ್ ಮೂಲಕ (ONLINE) ಮುಖ್ಯ ಪರೀಕ್ಷೆಯ ಅರ್ಜಿ ಭರ್ತಿ ಮಾಡುವ ಮುನ್ನ ಈ ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಓದಿ ಪಾಲಿಸತಕ್ಕದ್ದು.

ಹಂತ 1:- ಅಭ್ಯರ್ಥಿಗಳು ಆಯೋಗದ ಅಧಿಕೃತ ವೆಬ್ ಸೈಟ್ http://kpsc.kar.nic.in/apply online ಲಿಂಕ್ ಅನ್ನು ತೆರೆದ ಕೂಡಲೇ ಕಂಪ್ಯೂಟರ್ ಪರದೆಯ ಮೇಲೆ 'Application For Gazetted Probationers -2017-18 (Main Examination)' ಎಂದು ಮೂಡುತ್ತದೆ ಮತ್ತು ಅಭ್ಯರ್ಥಿಗಳಿಗೆ ಸೂಚನೆಗಳು/ಪರೀಕ್ಷಾ ಶುಲ್ಕದ ವಿವರಗಳು ಲಭ್ಯವಾಗಲಿದ್ದು, ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವ ಮುನ್ನ ನೀಡಿರುವ ಸೂಚನೆಗಳಲ್ಲಿನ ಎಲ್ಲಾ ವಿವರಗಳನ್ನು ಮತ್ತು ಅರ್ಜಿ ಸಲ್ಲಿಸುವ ಸೂಚನೆ/ವಿಧಾನಗಳನ್ನು ತಪ್ಪದೇ ಓದಿಕೊಂಡು ಅದರಂತೆ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು.

ಹಂತ 2:- ಅಭ್ಯರ್ಥಿಯು ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಬಳಸಿರುವ User name ಹಾಗೂ Password ಅನ್ನು ಬಳಸಿ ಆಯೋಗದ ಅಧಿಕೃತ ವೆಬ್ ಸೈಟ್ http://kpsc.kar.nic.in/apply ನಲ್ಲಿ ಲಾಗಿನ್ ಆಗಬೇಕು. ಲಾಗಿನ್ ಆದ ನಂತರ ಚಾಲ್ತಿಯಲ್ಲಿರುವ ಅಧಿಸೂಚನೆಗಳ ಪಕ್ಕದಲ್ಲಿ click here to apply link ಲಭ್ಯವಿದೆ. ಈ ಅರ್ಜಿಯಲ್ಲಿ ಅಭ್ಯರ್ಥಿಗಳು ಅವರ ಪೂರ್ವಭಾವಿ ಪರೀಕ್ಷೆಯ ಅರ್ಜಿಯಲ್ಲಿ ಭರ್ತಿ ಮಾಡಿದ ಎಲ್ಲಾ ವೈಯುಕ್ತಿಕ ವಿವರಗಳು,ವಿದ್ಯಾರ್ಹತೆ, ಕೋರಿದ ಮೀಸಲಾತಿ ಹಾಗೂ ಸರ್ಕಾರಿ ಸೇವೆಯ ವಿವರಗಳು (ಸೇವೆಯಲ್ಲಿ ಇರುವವರಿಗೆ) ಮುದ್ರಿತವಾಗಿದ್ದು, ಈ ಅರ್ಜಿಯಲ್ಲಿ ಅಭ್ಯರ್ಥಿಗಳು ಹುದ್ದೆಗಳ ಆದ್ಯತೆ ಮತ್ತು ಉತ್ತರಿಸುವ ಭಾಷಾ ಮಾಧ್ಯಮ, ಪರೀಕ್ಷೆ ಕೇಂದ್ರದ ವಿವರವನ್ನು ಭರ್ತಿ ಮಾಡತಕ್ಕದ್ದು. ಅರ್ಜಿಯಲ್ಲಿ ಭರ್ತಿ ಮಾಡಿದ ನಂತರದಲ್ಲಿ ಯಾವುದೇ ಕಾರಣಕ್ಕೆ ಬದಲಿಸಲು ಅವಕಾಶ ಇರುವುದಿಲ್ಲ.

ಹಂತ 3:- ಅರ್ಜಿಯನ್ನು ಭರ್ತಿ ಮಾಡಿದ ನಂತರ ನಮೂದಿಸಿರುವ ವಿವರಗಳನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಬೇಕು. ಮುಖ್ಯ ಪರೀಕ್ಷೆಯ ಅರ್ಜಿಯಲ್ಲಿ ನಮೂದಿಸಿರುವ ವಿವರಗಳಲ್ಲಿ ಯಾವುದಾದರೂ ತಿದ್ದುಪಡಿ ಮಾಡಬೇಕಾದಲ್ಲಿ Edit button ಮೇಲೆ ಕ್ಲಿಕ್ ಮಾಡಿ ಅಗತ್ಯ ತಿದ್ದುಪಡಿಗಳನ್ನು ಮಾಡಬಹುದು. 'Submit' Button ಅನ್ನು ಒತ್ತಿದ ಮೇಲೆ ಯಾವುದೇ ತಿದ್ದುಪಡಿಗಳನ್ನು ಮಾಡಲು ಅವಕಾಶವಿರುವುದಿಲ್ಲ. ತದನಂತರ Print Button ಅನ್ನು ಒತ್ತಿ ಮುಖ್ಯ ಪರೀಕ್ಷೆಯ ಅರ್ಜಿಯನ್ನು (Application Preview) ಹಾಗೂ ಶುಲ್ಕ ಪಾವತಿಸಲು ಚಲನ್ ಅನ್ನು ಡೌನಲೋಡ್ ಮಾಡಿಟ್ಟುಕೊಳ್ಳತಕ್ಕದ್ದು.

ಹಂತ 4:- ಪರೀಕ್ಷಾ ಶುಲ್ಕವನ್ನು ನೆಟ್ ಬ್ಯಾಂಕಿಂಗ್/ಡೆಬಿಟ್ ಕಾರ್ಡ್/ಕ್ರೆಡಿಟ್ ಕಾರ್ಡ್ ಮೂಲಕ ಅಥವಾ ಸಿ ಎಸ್ ಸಿ (ಕಾಮನ್ ಸರ್ವಿಸ್ ಸೆಂಟರ್) ಗಳಲ್ಲಿ ಪಾವತಿಸಬಹುದು. ಬೇರೆ ಯಾವುದೇ ತಂತ್ರಾಂಶ ಬಳಸಿ ಶುಲ್ಕ ಪಾವತಿಸಲು ಅವಕಾಶವಿಲ್ಲ ಹಾಗೂ ಇದು ತಿರಸ್ಕೃತವಾಗುವುದು.

ಶುಲ್ಕ ಪಾವತಿಸಲು ಅಭ್ಯರ್ಥಿಗಳು ಈ ಕೆಳಕಂಡ ಪದ್ಧತಿಯನ್ನು ಪಾಲಿಸಬೇಕು:-

Login ಆದ ನಂತರ ಎಡ ಭಾಗದಲ್ಲಿ My Account link ಲಭ್ಯವಿದ್ದು ಈ My Account link ಅನ್ನು ಒತ್ತಬೇಕು. ಅಭ್ಯರ್ಥಿಯು ವಿವಿಧ ಅಧಿಸೂಚನೆಗಳಿಗೆ ಸಲ್ಲಿಸಿದ ಅರ್ಜಿಗಳ ಹಾಗೂ ಶುಲ್ಕ ಪಾವತಿಸಿದ ವಿವರವನ್ನು ನೋಡಬಹುದು. ಶುಲ್ಕ ವಿವರಗಳಲ್ಲಿ Unpaid ಎಂದು ನಮೂದಿಸಿರುವ ಅರ್ಜಿಗಳ ಎದುರು Pay Now link ಲಭ್ಯವಿರುತ್ತದೆ. Pay Now link ಅನ್ನು ಒತ್ತಿದಲ್ಲಿ ಮೂರು ಆಯ್ಕೆಗಳು ಲಭ್ಯವಾಗುತ್ತದೆ. (ಎ) ನೆಟ್ ಬ್ಯಾಂಕಿಂಗ್ (ಬಿ) ಡೆಬಿಟ್ ಕಾರ್ಡ್ (ಸಿ) ಕ್ರೆಡಿಟ್ ಕಾರ್ಡ್ ಆನ್ ಲೈನ್ ಪಾವತಿಯ ಮಾದರಿಯಲ್ಲಿ ಅಭ್ಯರ್ಥಿಯು ನೆಟ್ ಬ್ಯಾಂಕಿಂಗ್ ಡೆಬಿಟ್ ಕಾರ್ಡ್ ಮತ್ತು ಕ್ರೆಡಿಟ್ ಕಾರ್ಡ್ ಮುಖಾಂತರ ಶುಲ್ಕ ಪಾವತಿಸಬಹುದು. ಪರೀಕ್ಷಾ ಶುಲ್ಕವನ್ನು ಯಾವುದೇ ಕಾಮನ್ ಸರ್ವೀಸ್ ಸೆಂಟರ್ ಗಳಲ್ಲಿ (CSC) ಅಥವಾ ನೆಟ್ ಬ್ಯಾಂಕಿಂಗ್/ಡೆಬಿಟ್ ಕಾರ್ಡ್/ ಕ್ರೆಡಿಟ್ ಕಾರ್ಡ್ ಮೂಲಕ ಸಂದಾಯ ಮಾಡಬಹುದಾಗಿರುತ್ತದೆ. ಶುಲ್ಕವನ್ನು ಪಾವತಿಸದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಹಂತ 5:- ಶುಲ್ಕ ಪಾವತಿಸಿದ ನಂತರ Online ಅರ್ಜಿಯ ಪ್ರಿವ್ಯೂವನ್ನು Download ಮಾಡಿಕೊಂಡು ತಮ್ಮ ಸಹಿಯೊಂದಿಗೆ ಸ್ವಯಂ ದೃಢೀಕರಿಸಿದ ಎಲ್ಲಾ ಪ್ರಮಾಣ ಪತ್ರಗಳ ಪ್ರತಿಗಳನ್ನು (ದ್ವಿಪ್ರತಿಯಲ್ಲಿ) ಅರ್ಜಿಯೊಂದಿಗೆ ಲಗತ್ತಿಸಿ ನಿಗದಿತ ದಿನಾಂಕ:15-12-2020 ರೊಳಗಾಗಿ ಆಯೋಗಕ್ಕೆ ಖುದ್ದಾಗಿ ಸಲ್ಲಿಸತಕ್ಕದ್ದು ಅಥವಾ ಸ್ಪೀಡ್ ಪೋಸ್ಟ್ ಮೂಲಕ "ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-560001 ಇಲ್ಲಿಗೆ ರವಾನಿಸತಕ್ಕದ್ದು.

3. ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

4. ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ/ಸಮಯದ ನಂತರ ಶುಲ್ಕವನ್ನು ಪಾವತಿಸಲು ಅವಕಾಶವಿರುವುದಿಲ್ಲ. ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್, ಇತ್ಯಾದಿಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ವಿಶೇಷ ಸೂಚನೆ: On-line ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help line) ಸಂಖ್ಯೆ 18005728707 ಅನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಭರ್ತಿ ಮಾಡಬಹುದು.

5. ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ಮುಖ್ಯ ಪರೀಕ್ಷೆಯ ವಿವರಗಳು ಈ ಕೆಳಕಂಡಂತಿವೆ:-

(ಎ) ಲಿಖಿತ ಪರೀಕ್ಷೆ:

ಅರ್ಹತಾ ಪತ್ರಿಕೆಗಳು	ಕನ್ನಡ	150 ಅಂಕಗಳು	2 ಗಂಟೆಗಳು
	ಇಂಗ್ಲೀಷ್	150 ಅಂಕಗಳು	2 ಗಂಟೆಗಳು

ಕಡ್ಡಾಯ ಪತ್ರಿಕೆಗಳು	ಪತ್ರಿಕೆ-1	ಪ್ರಬಂಧ	250 ಅಂಕಗಳು	3 ಗಂಟೆಗಳು
	ಪತ್ರಿಕೆ -2	ಸಾಮಾನ್ಯ ಅಧ್ಯಯನ-1	250 ಅಂಕಗಳು	3 ಗಂಟೆಗಳು
	ಪತ್ರಿಕೆ -3	ಸಾಮಾನ್ಯ ಅಧ್ಯಯನ-2	250 ಅಂಕಗಳು	3 ಗಂಟೆಗಳು
	ಪತ್ರಿಕೆ -4	ಸಾಮಾನ್ಯ ಅಧ್ಯಯನ-3	250 ಅಂಕಗಳು	3 ಗಂಟೆಗಳು
	ಪತ್ರಿಕೆ -5	ಸಾಮಾನ್ಯ ಅಧ್ಯಯನ-4	250 ಅಂಕಗಳು	3 ಗಂಟೆಗಳು
ಲಿಖಿತ ಪರೀಕ್ಷೆಯ ಒಟ್ಟು ಅಂಕಗಳು			1250 ಅಂಕಗಳು	

ಮುಖ್ಯ ಪರೀಕ್ಷೆಯ ಪಠ್ಯಕ್ರಮವನ್ನು ಅನುಬಂಧ-ಸಿ ರಲ್ಲಿ ಇರಿಸಲಾಗಿದೆ.

ಟಿಪ್ಪಣಿ:-

(1) ಅರ್ಹತಾ ಪತ್ರಿಕೆಗಳು ಅಂದರೆ ಕನ್ನಡ ಮತ್ತು ಇಂಗ್ಲೀಷ್ ನಲ್ಲಿ ಅರ್ಹತಾ ಪತ್ರಿಕೆಗಳಲ್ಲಿ ಪಡೆದ ಅಂಕಗಳು ಅರ್ಹತಾ ಸ್ವರೂಪದ್ದಾಗಿರುತ್ತವೆ. ಈ ಪತ್ರಿಕೆಗಳಲ್ಲಿ ಅರ್ಹತೆಗಾಗಿ ಪ್ರತಿಯೊಂದು ಪತ್ರಿಕೆಯಲ್ಲಿ ಕನಿಷ್ಠ ಶೇಕಡ 35 ಅಂಕಗಳನ್ನು , ಅಂದರೆ 52.5 ಅಂಕಗಳನ್ನು ನಿಗದಿಪಡಿಸಲಾಗಿದೆ. ಈ ಎರಡೂ ಪತ್ರಿಕೆಗಳಲ್ಲಿ ಗಳಿಸಿದ ಅಂಕಗಳನ್ನು ಆಯ್ಕೆಗಾಗಿ ಮೆರಿಟ್ ನಿರ್ಧರಿಸುವುದಕ್ಕಾಗಿ ಪರಿಗಣಿಸಲಾಗುವುದಿಲ್ಲ. ಈ ಎರಡು ಅರ್ಹತಾ ಪತ್ರಿಕೆಗಳಲ್ಲಿ ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಗಳಿಸದ ಅಭ್ಯರ್ಥಿಗಳು ವ್ಯಕ್ತಿತ್ವ ಪರೀಕ್ಷೆಗೆ ಮತ್ತು ಆಯ್ಕೆಗೆ ಅರ್ಹರಾಗುವುದಿಲ್ಲ ಹಾಗೂ ಇಂತಹ ಅಭ್ಯರ್ಥಿಗಳು ಇತರೆ ವಿಷಯಗಳಲ್ಲಿ ಪಡೆದ ಅಂಕಗಳನ್ನು ಪ್ರಕಟಿಸುವುದಿಲ್ಲ. ಮುಖ್ಯ ಪರೀಕ್ಷೆಯು ವಿವರಣಾತ್ಮಕ ಮಾದರಿಯಲ್ಲಿರುತ್ತದೆ ಮತ್ತು ಎಲ್ಲಾ ಪತ್ರಿಕೆಗಳು ಕಡ್ಡಾಯವಾಗಿರುತ್ತದೆ.

(2) ಮುಖ್ಯ ಪರೀಕ್ಷೆಯ ಕನ್ನಡ (ಪತ್ರಿಕೆ-1) ಹಾಗೂ ಇಂಗ್ಲೀಷ್ (ಪತ್ರಿಕೆ-2) ಪತ್ರಿಕೆಗಳು ಎಸ್.ಎಸ್.ಎಲ್.ಸಿ ಯ ಪ್ರಥಮ ಭಾಷೆಯ ಮಟ್ಟದ್ದಾಗಿರುತ್ತದೆ. ಉಳಿದ ಪತ್ರಿಕೆಗಳು ಪದವಿ ಮಟ್ಟದ್ದಾಗಿರುತ್ತದೆ.

(3) ಪ್ರಶ್ನೆ ಪತ್ರಿಕೆಗಳು (ಅಂದರೆ ಪ್ರಶ್ನೆ ಸಹಿತ ಉತ್ತರ ಪತ್ರಿಕೆಗಳು) ಕನ್ನಡ ಮತ್ತು ಇಂಗ್ಲೀಷ್ ಎರಡು ಭಾಷೆಗಳಲ್ಲಿ ಸಿದ್ಧಗೊಂಡಿರುತ್ತವೆ. ಅಭ್ಯರ್ಥಿಗಳು ಪತ್ರಿಕೆಯ ಉತ್ತರಗಳನ್ನು ಸಂಪೂರ್ಣವಾಗಿ ಕನ್ನಡದಲ್ಲಾಗಲಿ ಅಥವಾ ಇಂಗ್ಲೀಷ್ ಮಾಧ್ಯಮದಲ್ಲಾಗಲಿ ಉತ್ತರಿಸತಕ್ಕದ್ದು.

(4) ಎಲ್ಲಾ 05 ಪತ್ರಿಕೆಗಳು ಕಡ್ಡಾಯ ಪತ್ರಿಕೆಗಳಾಗಿರುತ್ತವೆ. ಪ್ರತಿ ಪತ್ರಿಕೆಯು ಗರಿಷ್ಠ 250 ಅಂಕಗಳನ್ನು ಒಳಗೊಂಡಿರುತ್ತದೆ ಮತ್ತು 03 ಗಂಟೆಗಳ ಅವಧಿಯದ್ದಾಗಿರುತ್ತದೆ.

(5) ಅರ್ಹತಾ ಪತ್ರಿಕೆಯ ಪ್ರಶ್ನೆ ಸಹಿತ ಉತ್ತರ ಪತ್ರಿಕೆಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಪ್ರಶ್ನೆ ಸಹಿತ ಉತ್ತರ ಪತ್ರಿಕೆಗಳಲ್ಲಿನ ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಇರುತ್ತವೆ ಕನ್ನಡ ಭಾಷೆಯಲ್ಲಿರುವ ಯಾವುದೇ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಗೊಂದಲವಾದಲ್ಲಿ ಅಭ್ಯರ್ಥಿಗಳು ಆಂಗ್ಲಭಾಷೆಯ ಪ್ರಶ್ನೆಗಳನ್ನು ಸಹ ನೋಡಿಕೊಂಡು ಪ್ರಶ್ನೆಯನ್ನು ಅರ್ಥೈಸಿಕೊಳ್ಳುವುದು. ಭಾಷಾ ವಿಷಯಗಳನ್ನು ಹೊರತುಪಡಿಸಿ ಅಭ್ಯರ್ಥಿಯು ತನ್ನ ಉಳಿದೆಲ್ಲಾ ಪ್ರಶ್ನೆ ಪತ್ರಿಕೆಗಳನ್ನು ಸಂಪೂರ್ಣವಾಗಿ ಅರ್ಜಿಯಲ್ಲಿ ಆಯ್ಕೆ ಮಾಡಿಕೊಂಡಿರುವ ಭಾಷಾ ಮಾಧ್ಯಮದಲ್ಲಿಯೇ ಬರೆಯತಕ್ಕದ್ದು. ಆಯ್ಕೆ ಮಾಡಿಕೊಂಡ ಮಾಧ್ಯಮವನ್ನು ಬದಲಾಯಿಸಿದಲ್ಲಿ ಅಥವಾ ಅರ್ಧ ಕನ್ನಡ ಹಾಗೂ ಅರ್ಧ ಆಂಗ್ಲ ಮಾಧ್ಯಮದಲ್ಲಿ ಉತ್ತರಿಸಿದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನಗೊಳಿಸುವುದಿಲ್ಲ. ಆಯ್ಕೆ ಮಾಡಿಕೊಂಡ ಮಾಧ್ಯಮವನ್ನು ಯಾವುದೇ ಹಂತದಲ್ಲಿ ಬದಲಾವಣೆ ಮಾಡಲು ಅವಕಾಶವಿಲ್ಲ.

(6) ಎಲ್ಲಾ ವಿವರಣಾತ್ಮಕ ಉತ್ತರ ಪತ್ರಿಕೆಗಳನ್ನು ವಿದ್ಯುನ್ಮಾನ ಮಾದರಿಯಲ್ಲಿ ಮೌಲ್ಯಮಾಪನ ಮಾಡಲಾಗುವುದು (ಸ್ಕ್ಯಾನಿಂಗ್ ಮಾಡಿ Onscreen Marking ಮಾಡಲಾಗುವುದು).

(ಬಿ) ವ್ಯಕ್ತಿತ್ವ ಪರೀಕ್ಷೆ:- ಕರ್ನಾಟಕ ಗೆಜೆಟೆಡ್ ಪ್ರೊಬೆಷನರ್ಸ್ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇಮಕಾತಿ) (ತಿದ್ದುಪಡಿ) ನಿಯಮಗಳು 2019 ರಂತೆ ಗ್ರೂಪ್-'ಎ' ಮತ್ತು 'ಬಿ' ಸೇವೆಗಳ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ 1:3ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಕರೆಯಲಾಗುವುದು. ಆಯೋಗವು, ಅಭ್ಯರ್ಥಿಗಳು ಮುಖ್ಯ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಜ್ಯೇಷ್ಠತೆ (Merit) ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿಯನ್ವಯ ಲಭ್ಯವಿರುವ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗನುಗುಣವಾಗಿ ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸಲಾಗುವುದು. ವ್ಯಕ್ತಿತ್ವ ಪರೀಕ್ಷೆಯು ಗರಿಷ್ಠ 50 ಅಂಕಗಳನ್ನು ಒಳಗೊಂಡಿರುತ್ತದೆ.

6. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಅಧಿಸೂಚಿಸಿರುವ ಹುದ್ದೆಗಳ ಆದ್ಯತಾನುಕ್ರಮವನ್ನು(Preference) ಭರ್ತಿ ಮಾಡತಕ್ಕದ್ದು. ಆದ್ಯತೆ ನೀಡದಿರುವ ಹುದ್ದೆಗಳಿಗೆ ಅವರನ್ನು ಪರಿಗಣಿಸಲಾಗುವುದಿಲ್ಲ. ಹುದ್ದೆಗಳ ವಿವರಗಳನ್ನು ಅನುಬಂಧ-ಎ ರಲ್ಲಿ ನೀಡಲಾಗಿದೆ.

ವಿಶೇಷ ಸೂಚನೆ:- ಅಂಗವಿಕಲ ಅಭ್ಯರ್ಥಿಗಳು ಹುದ್ದೆಗಳಿಗೆ ಆದ್ಯತೆ (Preference) ನೀಡುವ ಸಮಯದಲ್ಲಿ ಸಂಬಂಧಿತ ಇಲಾಖೆಗಳು ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮದನ್ವಯ ಗುರುತಿಸಿರುವ ಅನುಸೂಚಿಯನ್ನು ಪರಿಶೀಲಿಸತಕ್ಕದ್ದು (ಅನುಬಂಧ-ಬಿ). ಈಗಾಗಲೇ ಆಯೋಗವು ಪೂರ್ವಭಾವಿ ಪರೀಕ್ಷೆಗೆ ಹೊರಡಿಸಿರುವ ಅಧಿಸೂಚನೆಯಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಗುರುತಿಸಲಾಗಿರುವ ಹುದ್ದೆಗಳಿಗೆ ಅನುಗುಣವಾಗಿ ಪರಿಶೀಲಿಸಿಕೊಂಡು ಆದ್ಯತೆಯನ್ನು ನೀಡತಕ್ಕದ್ದು.

ಮುಖ್ಯ ಪರೀಕ್ಷೆ ನಡೆಸುವ ಕೇಂದ್ರಗಳು:- ಮುಖ್ಯ ಪರೀಕ್ಷೆಯನ್ನು ಬೆಂಗಳೂರು ಮತ್ತು ಧಾರವಾಡ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು. ಇವುಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆಮಾಡಿಕೊಳ್ಳುವುದು. ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರದ ಬದಲಾವಣೆಯ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

7. ಪರೀಕ್ಷಾ ಕೇಂದ್ರಗಳು ಮತ್ತು ದಿನಾಂಕಗಳು ಆಯೋಗದ ವಿವೇಚನಾನುಸಾರವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಈ ಸಂಬಂಧದಲ್ಲಿ ಆಯೋಗದ ತೀರ್ಮಾನವೇ ಅಂತಿಮವಾಗಿರುತ್ತದೆ ಮತ್ತು ಈ ವಿಷಯದಲ್ಲಿ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

8. ಮುಖ್ಯ ಪರೀಕ್ಷೆಯ ಅರ್ಜಿಯನ್ನು ಸೂಕ್ತವಾಗಿ ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ಅರ್ಜಿಯಲ್ಲಿ ಸಹಿಯನ್ನು, ಜನ್ಮದಿನಾಂಕಕ್ಕೆ ಸಂಬಂಧಿಸಿದ, ವಿದ್ಯಾರ್ಹತೆ ಮತ್ತು ಇತರೆ ಮೀಸಲಾತಿ ಪ್ರಮಾಣ ಪತ್ರಗಳು (ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ಟಿ.ಸಿ./ಕ್ಯುಮುಲೆಟೀವ್ ರೆಕಾರ್ಡ್, ಘಟಿಕೋತ್ಸವ/ ಪದವಿ ಪ್ರಮಾಣ ಪತ್ರ, ಜಾತಿ, ಗ್ರಾಮೀಣ, ಕನ್ನಡ ಮಾಧ್ಯಮ, ಅಂಗವಿಕಲ (ಲಿಪಿಕಾರರ ಸಹಾಯ ಪಡೆಯಲು ಇಚ್ಛಿಸುವಂತ ಅಭ್ಯರ್ಥಿಗಳು ಅವರು ಮತ್ತು ಅವರ ಲಿಪಿಕಾರರ ದೃಢೀಕರಣವನ್ನು), ಮಾಜಿ ಸೈನಿಕ, ವಿಧವಾ ಪ್ರಮಾಣ ಪತ್ರ, ನಿರಾಕ್ಷೇಪಣ ಪ್ರಮಾಣ ಪತ್ರ) ಹಾಗೂ ಸಂಬಂಧಿತ ಇತರೆ ದಾಖಲಾತಿಗಳ ಸ್ವಯಂ ದೃಢೀಕೃತ ಪ್ರತಿಗಳನ್ನು ಭರ್ತಿ ಮಾಡಿದ ಜೆಜೆಟೆಡ್ ಪ್ರೊಬೇಷನರ್ಸ್ ಮುಖ್ಯ ಪರೀಕ್ಷೆಯ ಅರ್ಜಿಯೊಂದಿಗೆ ಅಪ್ಲೋಡ್ ಮಾಡತಕ್ಕದ್ದು. ಇದೇ ಪ್ರಮಾಣ ಪತ್ರ ಡೌನಲೋಡ್ ಮಾಡಿ ಅರ್ಜಿಯೊಂದಿಗೆ ಲಗತ್ತಿಸಿ ಆಯೋಗಕ್ಕೆ ಖುದ್ದಾಗಿ ಅಥವಾ ಸ್ಪೀಡ್ ಪೋಸ್ಟ್ ಮೂಲಕ ರವಾನಿಸತಕ್ಕದ್ದು. ಆಯೋಗವು ಸೂಚಿಸಿದಾಗ ಇದೇ ದಾಖಲೆಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ಹಾಜರುಪಡಿಸತಕ್ಕದ್ದು.

9. ಭರ್ತಿ ಮಾಡಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ಅಭ್ಯರ್ಥಿಯು ಕಡ್ಡಾಯವಾಗಿ ಇಟ್ಟುಕೊಳ್ಳತಕ್ಕದ್ದು. ಉತ್ತರಿಸುವ ಭಾಷಾ ಮಾಧ್ಯಮದ/ ಹುದ್ದೆಗಳ ಆದ್ಯತೆ/ ಪರೀಕ್ಷಾ ಕೇಂದ್ರದ ಬದಲಾವಣೆಗಾಗಿ ಸಲ್ಲಿಸುವ ಕೋರಿಕೆಗಳನ್ನು ಸ್ವೀಕರಿಸುವುದಿಲ್ಲ. ಆದ್ದರಿಂದ ಇವುಗಳನ್ನು ಎಚ್ಚರಿಕೆಯಿಂದ ಅರ್ಜಿಯ ಅಂಕಣಗಳಲ್ಲಿ ಭರ್ತಿ ಮಾಡುವುದು.

10. ಪರೀಕ್ಷಾ ಶುಲ್ಕ:-

(ಅ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-(1), ಮಾಜಿ ಸೈನಿಕ, ಅಂಗವಿಕಲ ಅಭ್ಯರ್ಥಿಗಳಿಗೆ ರೂ. 300/- (ಆ) ಇತರೆ ಅಭ್ಯರ್ಥಿಗಳಿಗೆ ರೂ. 500/-

ವಿಶೇಷ ಸೂಚನೆ: ರೂ. 35/-ರ ಪ್ರಕ್ರಿಯೆ ಶುಲ್ಕ (processing fees) ವನ್ನು ಎಲ್ಲಾ ಅಭ್ಯರ್ಥಿಗಳು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಮಾಜಿ ಸೈನಿಕ ಹಾಗೂ ಅಂಗವಿಕಲ ಅಭ್ಯರ್ಥಿಗಳು ಸೇರಿದಂತೆ) ಕಡ್ಡಾಯವಾಗಿ ಪಾವತಿಸತಕ್ಕದ್ದು, ಪಾವತಿಸದಿದ್ದಲ್ಲಿ ಅವರ ಅರ್ಜಿಯನ್ನು ತಿರಸ್ಕರಿಸಲಾಗುವುದು.

11. ಮುಖ್ಯ ಪರೀಕ್ಷೆಯ ಅರ್ಜಿಯ ಅಂಕಣ 01 ರಿಂದ 08 ಮತ್ತು 10 ಇವುಗಳ ವಿವರಗಳನ್ನು ಪೂರ್ವಭಾವಿ ಪರೀಕ್ಷೆಗೆ ಸಲ್ಲಿಸಿದ ಅರ್ಜಿಯಲ್ಲಿದ್ದಂತೆ ನಮೂದಿಸಲಾಗಿದೆ. ಯಾವುದೇ ಕಾರಣಕ್ಕೂ ಇವುಗಳ ಬದಲಾವಣೆಗೆ ಅವಕಾಶವಿಲ್ಲ.

12. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 272 ಸೆನೆನಿ 2013, ದಿನಾಂಕ:09-11-2020ರಂತೆ ಅಂಗವಿಕಲ ಅಭ್ಯರ್ಥಿಗಳಿಗೆ ವಿಶೇಷ ಸೂಚನೆಗಳು:-

(1) ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಆಯ್ಕೆ ಪ್ರಾಧಿಕಾರ ನಡೆಸುವ ಲಿಖಿತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಬರವಣಿಗೆ ಸಾಮರ್ಥ್ಯವನ್ನು ಕುಂಠಿತಗೊಳಿಸುವ ದೃಷ್ಟಿಮಾಂದ್ಯತೆ, ಚಲನವಲನ ವೈಕಲ್ಯ ಮತ್ತು ಮೆದುಳಿನ ಪಾರ್ಶ್ವವಾಯು ಅಂಗವಿಕಲತೆಗಳನ್ನು ಮತ್ತು ಇತರೆ ವರ್ಗಗಳ ಎದ್ದುಕಾಣುವ ಅಂಗವಿಕಲತೆಗಳನ್ನು (Blindness, Locomotor disability, Cerebral palsy andother categories of benchmark disablities) ಹೊಂದಿರುವ ಅಭ್ಯರ್ಥಿಗಳಿಗೆ ಮುಖ್ಯ ಪರೀಕ್ಷೆ ಬರೆಯಲು ಪ್ರತಿ ಒಂದು ಗಂಟೆಗೆ 20 ನಿಮಿಷಗಳ ಹೆಚ್ಚುವರಿ ಕಾಲಾವಕಾಶವನ್ನು ನೀಡಲಾಗುವದು.

(2) ಅಭ್ಯರ್ಥಿಯು ಮುಖ್ಯ ಪರೀಕ್ಷೆ ಬರೆಯಲು ಲಿಪಿಕಾರರ (Scribe) ಸಹಾಯವನ್ನು ಪಡೆಯಲು ಅಥವಾ ಸ್ವತ: ಲಿಪಿಕಾರರನ್ನು ಕರೆತರಲು ಅವಕಾಶವಿರುತ್ತದೆ. ಈ ಕುರಿತು ಅಭ್ಯರ್ಥಿಗಳು ಮುಖ್ಯ ಪರೀಕ್ಷೆಯ ಅರ್ಜಿಯಲ್ಲಿಯೇ ವಿವರಗಳನ್ನು ನಮೂದಿಸಬೇಕು.

(3) ದೃಷ್ಟಿಮಾಂದ್ಯತೆ, ಚಲನವಲನ ವೈಕಲ್ಯ (ಎರಡೂ ತೋಳುಗಳು ಪೀಡಿತಗೊಂಡಂತಹ BA) ಮತ್ತು ಮೆದುಳಿನ ಪಾರ್ಶ್ವವಾಯು ಈ ಎದ್ದುಕಾಣುವ ಅಂಗವಿಕಲತೆಯೊಂದನ್ನು ಹೊಂದಿರುವ ಅಭ್ಯರ್ಥಿಯು ಇಚ್ಛೆಪಟ್ಟಲ್ಲಿ ಲಿಪಿಕಾರರ ಸೌಲಭ್ಯವನ್ನು ಒದಗಿಸಲಾಗುವುದು.

(4) ಇತರೆ ವರ್ಗಗಳ ಎದ್ದುಕಾಣುವ ಅಂಗವಿಕಲತೆ ಹೊಂದಿದ ಅಭ್ಯರ್ಥಿಗಳ ಪ್ರಕರಣಗಳಲ್ಲಿ ಅನುಬಂಧ-1ರ ನಮೂನೆಯಲ್ಲಿ ಸಂಬಂಧಿಸಿದ ಅಭ್ಯರ್ಥಿಯು ಬರೆಯಲು ದೈಹಿಕ ಅಸಮರ್ಥತೆ ಹೊಂದಿರುವ ಕುರಿತು ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಪಡೆದಲ್ಲಿ ಅಂತಹ ಅಭ್ಯರ್ಥಿಗಳಿಗೆ ಲಿಪಿಕಾರರ ಸಹಾಯವನ್ನು ಒದಗಿಸಲಾಗುವುದು.

(5) ಸ್ವತ: ಲಿಪಿಕಾರರನ್ನು ಕರೆತರುವ ಅಭ್ಯರ್ಥಿಯು ತನ್ನ ವಿದ್ಯಾರ್ಹತೆಗಿಂತ ಲಿಪಿಕಾರನ ವಿದ್ಯಾರ್ಹತೆ ಒಂದು ಹಂತ ಕೆಳಗಿರಬೇಕು ಹಾಗೂ ಲಿಪಿಕಾರನ ದುರ್ನಡತೆಗೆ ಅಭ್ಯರ್ಥಿಯೇ ಜವಾಬ್ದಾರನಾಗಿರುತ್ತಾನೆ.

(6) ಅಂಗವಿಕಲ ಅಭ್ಯರ್ಥಿಗಳಿಗೆ ಮುಖ್ಯ ಪರೀಕ್ಷೆಯ ಪ್ರಶ್ನೆ ಸಹಿತ ಉತ್ತರ ಪತ್ರಿಕೆಯಲ್ಲಿ ಪ್ರಶ್ನೆಗಳನ್ನು ದೊಡ್ಡ ಪ್ರಿಂಟುಗಳಲ್ಲಿ (Large Prints) ಬೇಕಿದ್ದಲ್ಲಿ ಮುಖ್ಯ ಪರೀಕ್ಷೆಯ ಅರ್ಜಿಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

(7) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 272 ಸೆನೆನಿ 2013, ದಿನಾಂಕ:09-11-2020ರ ಪ್ರಕಾರ 2016ರ ಅಧಿನಿಯಮದಲ್ಲಿ ಗೊತ್ತುಪಡಿಸಿದಂತೆ ಎದ್ದು ಕಾಣುವ ಅಂಗವಿಕಲತೆ (benchmark disablity) ಅಥವಾ ನಿರ್ದಿಷ್ಟಪಡಿಸಿದ ಅಂಗವಿಕಲತೆ (specfified disablity) ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಇತರೆ ಅಗತ್ಯ ದಾಖಲೆಗಳೊಂದಿಗೆ, ಅಂಗವಿಕಲತೆಗೆ ಸಂಬಂಧಿಸಿದ ಮೀಸಲಾತಿಯನ್ನು ಕೋರಿ ಅಂಗವಿಕಲತೆಯ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು. ಅಭ್ಯರ್ಥಿಯು ಪರೀಕ್ಷೆಯನ್ನು ಬರೆಯಲು ದೈಹಿಕ ಅಸಮರ್ಥತೆ ಹೊಂದಿರುತ್ತೇನೆಂದು ಭಾವಿಸಿದಲ್ಲಿ ಮೇಲ್ಕಂಡಂತೆ ನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಪರೀಕ್ಷೆಯನ್ನು ಬರೆಯಲು ಅವನು ದೈಹಿಕ ಅಸಮರ್ಥತೆ ಹೊಂದಿದ್ದಾನೆ ಎಂದು ವೈದ್ಯಕೀಯ ಮಂಡಳಿಯಿಂದ ನಿಗದಿಪಡಿಸಿದ ನಮೂನೆ (ಅನುಬಂಧ-1) ಪ್ರಮಾಣ ಪತ್ರವನ್ನು ಪಡೆದು ಮುಖ್ಯ ಪರೀಕ್ಷೆಯ ಅರ್ಜಿಯೊಂದಿಗೆ ಅಪ್ಲೋಡ್ ಮಾಡತಕ್ಕದ್ದು.

14. ಮುಖ್ಯ ಪರೀಕ್ಷೆಗೆ ಪ್ರಶ್ನೆ ಪತ್ರಿಕೆ ಸಹಿತ ಉತ್ತರ ಪತ್ರಿಕೆ (Question based Answer Booklet) ನೀಡಲಾಗುತ್ತದೆ. ಆದುದರಿಂದ ಅಭ್ಯರ್ಥಿಗಳು ಉತ್ತರ ಪತ್ರಿಕೆಯ ಮುಖಪುಟದಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

15. ಪ್ರಶ್ನೆ ಸಹಿತ ಉತ್ತರ ಪತ್ರಿಕೆಯಲ್ಲಿ ಪ್ರಶ್ನೆಗಳಿಗೆ ಮಾತ್ರ ಉತ್ತರಗಳನ್ನು ಬರೆಯಬೇಕು. ಅನಾವಶ್ಯಕ ಬರಹಗಳಿದ್ದಲ್ಲಿ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು. ಉದಾ: ಓಂ, ಶ್ರೀ ಇತರೆ ಚಿಹ್ನೆಗಳು , ನೋಂದಣಿ ಸಂಖ್ಯೆ, ಮೊಬೈಲ್ ಸಂಖ್ಯೆ,ಹೆಸರು ಇತ್ಯಾದಿಗಳನ್ನು ಬರೆಯತಕ್ಕದ್ದಲ್ಲ.

16. ಅಭ್ಯರ್ಥಿಗಳು ಪರೀಕ್ಷಾ ಸಮಯದಲ್ಲಿ ಒಂದೇ ಬಣ್ಣದ ಶಾಯಿಯ ಪೆನ್ನನ್ನು ಮಾತ್ರ ಉಪಯೋಗಿಸತಕ್ಕದ್ದು, ಯಾವುದೇ ಕಾರಣಕ್ಕೂ ಬೇರೆ ಬೇರೆ ಬಣ್ಣಗಳ ಶಾಯಿಯ ಪೆನ್ನುಗಳನ್ನು ಬಳಸಬಾರದು. ಹೈಲೈಟರ್‌ಗಳನ್ನು ಉಪಯೋಗಿಸಬಾರದು. ಅನಿವಾರ್ಯ ಕಾರಣಗಳಿಂದ ಬೇರೆ ಬೇರೆ ಬಣ್ಣಗಳ ಶಾಯಿಯ ಪೆನ್ನುಗಳನ್ನು ಬಳಸಿದ್ದಲ್ಲಿ ಕೊಠಡಿಯ ಸಂವೀಕ್ಷಕರಿಂದ ದೃಢೀಕರಿಸಬೇಕು.

17. ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆ ಇರುವ ಸ್ಥಳದಲ್ಲಿಯೇ ಕುಳಿತು ಪರೀಕ್ಷೆಯನ್ನು ಬರೆಯತಕ್ಕದ್ದು ಮತ್ತು ನಾಮಿನಲ್ ರೋಲ್‌ನಲ್ಲಿ ತನ್ನ ನೋಂದಣಿ ಸಂಖ್ಯೆ ಮತ್ತು ಭಾವಚಿತ್ರ ಇರುವ ಅಂಕಣದಲ್ಲಿಯೇ ವಿವರಗಳನ್ನು ಭರ್ತಿ ಮಾಡಿ ಸಹಿ ಮಾಡತಕ್ಕದ್ದು. ಇಲ್ಲವಾದಲ್ಲಿ ಆಯೋಗವು ತೆಗೆದುಕೊಳ್ಳುವ ಶಿಸ್ತುಕ್ರಮಕ್ಕೆ ಬದ್ಧರಾಗಿರಬೇಕು.

18. ಅಧಿಸೂಚನೆ ಸಂಖ್ಯೆ: ಪಿಎಸ್ ಸಿ 1 ಇ(1)-ಜಿಪಿ/2020 ದಿನಾಂಕ: 31-01-2020 ರಲ್ಲಿ ವಿವರಿಸಿದಂತೆ ನಿಗದಿಪಡಿಸಿದ ನಮೂನೆಯಲ್ಲಿ ಪಡೆದ ಪ್ರಮಾಣ ಪತ್ರಗಳನ್ನು ಮಾತ್ರ ಅಪ್ಲೋಡ್ ಮಾಡಬೇಕು (ನಮೂನೆಗಳನ್ನು ಆಯೋಗದ ವೆಬ್ ಸೈಟ್ ರಲ್ಲಿ ತೋರಿಸಲಾಗಿದೆ) ನಿಗದಿತ ನಮೂನೆಯಲ್ಲಿ ಅಪ್ಲೋಡ್ ಮಾಡದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

19. ಸೇವೆಯಲ್ಲಿರುವ ಅಭ್ಯರ್ಥಿಗಳು ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ನೇಮಕಾತಿ ಪ್ರಾಧಿಕಾರದಿಂದ ಅನುಮತಿ ಪಡೆದ ಬಗ್ಗೆ ನಿರಾಕ್ಷೇಪಣಾ ಪ್ರಮಾಣ ಪತ್ರದ ಪ್ರತಿಯನ್ನು ಅರ್ಜಿಯೊಂದಿಗೆ ಅಪ್ಲೋಡ್ ಮಾಡಬೇಕು.

20. ಮುಖ್ಯ ಪರೀಕ್ಷೆಗೆ ನೀಡುವ ಪ್ರವೇಶ ಪತ್ರವು ತಾತ್ಕಾಲಿಕ. ಏನಾದರೂ ತಪ್ಪು/ಅಕ್ರಮಗಳು ಕಂಡು ಬಂದಲ್ಲಿ ಅಭ್ಯರ್ಥಿತ್ವವನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಅಧಿಕಾರ ಆಯೋಗಕ್ಕಿರುತ್ತದೆ.

21. ಅಭ್ಯರ್ಥಿಗಳು ಅರ್ಜಿಯೊಂದಿಗೆ ಅಪ್ಲೋಡ್ ಮಾಡಬೇಕಾದ ದಾಖಲೆಗಳು :

1) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ/ ಎಸ್.ಎಸ್.ಎಲ್.ಸಿ ವರ್ಗಾವಣೆಯ ಪ್ರಮಾಣ ಪತ್ರ /ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ Extract of cumulative record)
2) ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಪದವಿಯ ಘಟಿಕೋತ್ಸವ ಪ್ರಮಾಣ ಪತ್ರ ಅಥವಾ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್‌ರವರಿಂದ ಪಡೆದ ಪ್ರಾವಿಷನಲ್ ಡಿಗ್ರಿ ಸರ್ಟಿಫಿಕೇಟ್ ಅಥವಾ ಎಲ್ಲಾ ವರ್ಷಗಳ ಅಂಕಪಟ್ಟಿಗಳು.
3) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, 2ಬಿ, 3ಎ, 3ಬಿ ಮಿಸಲಾತಿ ಅಭ್ಯರ್ಥಿಗಳು ನಮೂನೆ ಡಿ/ಇ/ಎಫ್ ನಲ್ಲಿ ತಹಶೀಲ್ದಾರ್‌ರಿಂದ ಪಡೆದ ಪ್ರಮಾಣ ಪತ್ರ.(ಮೀಸಲಾತಿ ಕೋರಿದ್ದಲ್ಲಿ)
4) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ-1 ಮತ್ತು 2ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)
5) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ).
6) ಸೈನಿಕ ಸೇವೆಯಿಂದ ಬಿಡುಗಡೆಯಾದ/ ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಪೂರ್ಣವಾಗಿ) ಮತ್ತು ಪೆನ್ಷನ್ (ಪಿಂಚಣಿ) ಪಡೆಯುತ್ತಿರುವ ದಾಖಲೆಯ ಪ್ರತಿ/ ಮಾಜಿ ಸೈನಿಕರ ಅವಲಂಬಿತರಾಗಿದ್ದಲ್ಲಿ ನಿಗದಿತ ನಮೂನೆಯಲ್ಲಿ ಮಾಜಿ ಸೈನಿಕರು ಸೇವೆಯಲ್ಲಿರುವಾಗ ಮೃತಪಟ್ಟಿರುವ ಅಥವಾ ಖಾಯಂ ಆಗಿ ಗಾಯಗೊಂಡಿರುವ ಪ್ರಮಾಣ ಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ).
7) ಅಂಗವಿಕಲ ಪ್ರಮಾಣ ಪತ್ರ ನಿಗದಿತ ನಮೂನೆಯಲ್ಲಿ (ವಯೋಮಿತಿಯಲ್ಲಿ ಸಡಿಲಿಕೆ ಹಾಗೂ ಮೀಸಲಾತಿ ಕೋರಿದ್ದಲ್ಲಿ).
8) ಹೈದರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳ ಮೀಸಲಾತಿಗೆ ಸಂಬಂಧಿಸಿದ ಅರ್ಹತಾ ಪ್ರಮಾಣಪತ್ರ (ಮೀಸಲಾತಿ ಕೋರಿದ್ದಲ್ಲಿ)
9) ವಿಧವೆಯರು 'ವಿಧವೆ' ಎಂಬ ಬಗ್ಗೆ ತಹಶೀಲ್ದಾರ್ ಕಛೇರಿಯಿಂದ ಪಡೆದ ಮೃತರ ಕುಟುಂಬದ ಜೀವಂತ ಸದಸ್ಯರ ಪ್ರಮಾಣ ಪತ್ರ (ವಯೋಮಿತಿಯಲ್ಲಿ ಸಡಿಲಿಕೆ ಕೋರಿದ್ದಲ್ಲಿ)
10) ಸೇವೆಯಲ್ಲಿರುವ ಅಭ್ಯರ್ಥಿಗಳು ನಿರಾಕ್ಷೇಪಣಾ (NOC) ಪ್ರಮಾಣ ಪತ್ರ.

ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:06-03-2020 ಹಾಗೂ ಗೆಜೆಟೆಡ್ ಪ್ರೊಬೇಷನರ್ಸ್ 2011 ರ ಅಭ್ಯರ್ಥಿಗಳಿಗೆ ದಿ:16-03-2020 ರೊಳಗಾಗಿ ನಿಗದಿತ ನಮೂನೆಯಲ್ಲಿ (ಆಯೋಗದ ವೆಬ್ ಸೈಟ್ ರಲ್ಲಿ ಲಭ್ಯವಿದೆ) ಪಡೆದಿರುವ ಮೀಸಲಾತಿ ಪ್ರಮಾಣ ಪತ್ರಗಳನ್ನೇ ಅರ್ಜಿಯೊಂದಿಗೆ ಅಪ್ಲೋಡ್ ಮಾಡತಕ್ಕದ್ದು. ನಂತರ ಪಡೆದ ಹಾಗೂ ಚಾಲ್ತಿಯಲ್ಲಿರದ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು/ಮೀಸಲಾತಿಯನ್ನು ತಿರಸ್ಕರಿಸಲಾಗುವುದು.

ಸಹಿ/-

(ಜಿ.ಸತ್ಯವತಿ)

ಕಾರ್ಯದರ್ಶಿ,

ಕರ್ನಾಟಕ ಲೋಕ ಸೇವಾ ಆಯೋಗ.

ಅನುಬಂಧ-ಎ

Annexure-A

POST CODE.	NAME OF THE POST AND SERVICE
	GROUP-A
01	ಕರ್ನಾಟಕ ಪೊಲೀಸ್ ಸೇವೆಗಳು- ಆರಕ್ಷಕ ಉಪಾಧೀಕ್ಷಕರು (ಡಿ.ವೈ.ಎಸ್.ಪಿ.) (ಒಳಾಡಳಿತ ಇಲಾಖೆ) DEPUTY SUPERINTENDENT OF POLICE- HOME DEPARTMENT
02	ಕರ್ನಾಟಕ ವಾಣಿಜ್ಯ ತೆರಿಗೆ ಸೇವೆಗಳು- ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಆರ್ಥಿಕ ಇಲಾಖೆ) ASSISTANT COMMISSIONER OF COMMERCIAL TAXES- FINANCE DEPT.
03	ಕರ್ನಾಟಕ ಕಾರ್ಮಿಕ ಸೇವೆಗಳು- ಸಹಾಯಕ ಕಾರ್ಮಿಕ ಆಯುಕ್ತರು (ಕಾರ್ಮಿಕ ಇಲಾಖೆ) ASSISTANT LABOUR COMMISSIONER, LABOUR DEPARTMENT
	GROUP-B
04	ಕರ್ನಾಟಕ ಆಡಳಿತ ಸೇವೆಗಳು- ತಹಶೀಲ್ದಾರ್-(ಗ್ರೇಡ್-2) (ಕಂದಾಯ ಇಲಾಖೆ) TAHASILDAR GRADE-II-KARNATAKA ADMINISTRATIVE SERVICE (REVENUE)
05	ಕರ್ನಾಟಕ ವಾಣಿಜ್ಯ ತೆರಿಗೆ ಸೇವೆಗಳು- ವಾಣಿಜ್ಯ ತೆರಿಗೆ ಅಧಿಕಾರಿ (ಆರ್ಥಿಕ ಇಲಾಖೆ) COMMERCIAL TAX OFFICER- FINANCE DEPT.
06	ಕರ್ನಾಟಕ ಕಾರಾಗೃಹಗಳ ಆಡಳಿತ ಸೇವೆಗಳು- ಸಹಾಯಕ ಅಧೀಕ್ಷಕರು, ಕಾರಾಗೃಹಗಳ ಇಲಾಖೆ (ಒಳಾಡಳಿತ ಇಲಾಖೆ) ASSISTANT SUPERINTENDENT OF PRISONS- HOME DEPT.
07	ಕರ್ನಾಟಕ ಅಬಕಾರಿ ಸೇವೆಗಳು- ಅಬಕಾರಿ ಉಪ ಅಧೀಕ್ಷಕರು (ಅಬಕಾರಿ ಇಲಾಖೆ) DEPUTY SUPERINTENDENT OF EXCISE, EXCISE DEPARTMENT
08	ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ಸೇವೆಗಳು-ಸಹಾಯಕ ನಿರ್ದೇಶಕರು (ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ) ASSISTANT DIRECTOR (FOOD, CIVIL SUPPLIES, CONSUMER AFFAIRS DEPARTMENT
09	ಕರ್ನಾಟಕ ಸಹಕಾರ ಲೆಕ್ಕಪರಿಶೋಧನಾ ಸೇವೆಗಳು-ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು, ಲೆಕ್ಕ ಪರಿಶೋಧನಾ ಇಲಾಖೆ(ಸಹಕಾರ ಇಲಾಖೆ) ASSISTANT DIRECTOR OF CO-OPERTAIVE AUDIT.(CO-OPERATIVE AUDIT DEPARTMENT (CO-OPERATION DEPARTMENT))
10	ಕರ್ನಾಟಕ ಕಾರ್ಮಿಕ ಸೇವೆಗಳು- ಕಾರ್ಮಿಕ ಅಧಿಕಾರಿ (ಕಾರ್ಮಿಕ ಇಲಾಖೆ) / LABOUR OFFICER (LABOUR DEPARTMENT)
11	ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ / ASSISTANT DIRECTOR (TOURISM DEPARTMENT)

ಅನುಬಂಧ-1 (ಅಪ್ಲೋಡ್ ಮಾಡತಕ್ಕದ್ದು)

ಅಭ್ಯರ್ಥಿ ಬರೆಯಲು ದೈಹಿಕ ಅಸಮರ್ಥತೆ ಹೊಂದಿರುವ ಬಗ್ಗೆ ಪ್ರಮಾಣ ಪತ್ರ.

ಈ ವೈದ್ಯಕೀಯ ಮಂಡಳಿಯು_____ (ಅಂಗವೈಕಲ್ಯ ಪ್ರಮಾಣ ಪತ್ರದಲ್ಲಿ ದಾಖಲಿಸಲಾಗಿರುವ ಅಂಗವೈಕಲ್ಯತೆಯ ಸ್ವರೂಪ ಮತ್ತು ಪ್ರತಿಶತ ಪ್ರಮಾಣ) ಅಂಗವೈಕಲ್ಯವನ್ನು ಹೊಂದಿರುವ ಶ್ರೀ/ಶ್ರೀಮತಿ/ಕುಮಾರಿ_____ (ಅಂಗವಿಕಲ ಅಭ್ಯರ್ಥಿಯ ಹೆಸರು) _____ ಇವರ ಮಗ/ಮಗಳು _____ (ಗ್ರಾಮ, ತಾಲ್ಲೂಕು, ಜಿಲ್ಲೆ) ಇಲ್ಲಿನ ನಿವಾಸಿ ಇವರನ್ನು ಪರೀಕ್ಷಿಸಿದ್ದು, ಇವರ ಅಂಗವೈಕಲ್ಯತೆಯು ಇವರ ಬರವಣಿಗೆ ಸಾಮರ್ಥ್ಯವನ್ನು ಕುಂಠಿತಗೊಳಿಸುವ ದೈಹಿಕ ಅಸಮರ್ಥ್ಯತೆಯಾಗಿದೆ ಎಂದು ಪ್ರಮಾಣೀಕರಿಸುತ್ತದೆ.

(ಸಹಿ)

ಅಧ್ಯಕ್ಷರು ಮತ್ತು ಸದಸ್ಯರು, ವೈದ್ಯಕೀಯ ಮಂಡಳಿ

ಸ್ಥಳ:

ದಿನಾಂಕ:

ಟಿಪ್ಪಣಿ:

1. ವೈದ್ಯಕೀಯ ಮಂಡಳಿಯ ಸ್ಥಳ ವಿವರಗಳೊಂದಿಗೆ, ಮಂಡಳಿ ಅಧ್ಯಕ್ಷರು ಮತ್ತು ಸದಸ್ಯರ ಹೆಸರು ಮತ್ತು ಹುದ್ದೆಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.
2. ಅಭ್ಯರ್ಥಿಯು ಹೊಂದಿರುವ ಅಂಗವೈಕಲ್ಯಕ್ಕೆ ಸಂಬಂಧಿಸಿದ ತಜ್ಞ ವೈದ್ಯರೊಬ್ಬರು ಆಯಾಯ ಮಂಡಳಿಯ ಸದಸ್ಯರಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು.

KA / BG GPO/ 2515 /WPP-47/ 2009 - 2011

ಅನುಬಂಧ - ಬಿ



ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಗುರುವಾರ, ಆಗಸ್ಟ್ ೫, ೨೦೦೯ (ಶ್ರಾವಣ ೧೪, ಶಕ ವರ್ಷ ೧೯೩೧)	ನಂ. ೬೪೩

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಡಿಪಿಎಆರ್ 21 ಎಸ್ಆರ್ಆರ್ 2008, ಬೆಂಗಳೂರು, ದಿನಾಂಕ: 3ನೇ ಆಗಸ್ಟ್, 2009

ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9(1ಎ)ರನ್ವಯ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಸಮೂಹ-ಎ ಮತ್ತು ಸಮೂಹ-ಬಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಶೇಕಡ 3ರಷ್ಟು ಮೀಸಲಾತಿ (ಸಮತಳ ಮೀಸಲಾತಿ)ಯನ್ನು ಕಲ್ಪಿಸಲಾಗಿರುವುದರಿಂದ;

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995 (ಕೇಂದ್ರ ಅಧಿನಿಯಮ 1996)ರ ಸೆಕ್ಷನ್ 32ರನ್ವಯ, ರಾಜ್ಯ ಸರ್ಕಾರವು ಸರ್ಕಾರದ ಇಲಾಖೆಗಳಲ್ಲಿ ಅಂಗವಿಕಲರಿಗೆ ಮೀಸಲಿಡಬಹುದಾದ ವೃಂದದ ಹುದ್ದೆಗಳನ್ನು ಗುರುತಿಸಬೇಕಾಗಿರುವುದರಿಂದ;

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ರ ಸೆಕ್ಷನ್ 32(1)ನ್ನು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9(1ಎ)ರೊಡನೆ ಓದಿಕೊಂಡಂತೆ, ಅದರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರ ದಿನಾಂಕ 13.9.2005ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 104 ಎಸ್ಆರ್ಆರ್ 2005ರಲ್ಲಿ ಅಂಗವಿಕಲರಿಗೆ ಹುದ್ದೆಗಳನ್ನು ಗುರುತಿಸಿ ಅಧಿಸೂಚಿಸಲಾಗಿರುವುದರಿಂದ;

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ರ ಸೆಕ್ಷನ್ 32(ಬಿ)ರನ್ವಯ, ರಾಜ್ಯ ಸರ್ಕಾರವು ಅಂಗವಿಕಲರಿಗಾಗಿ ಗುರುತಿಸಿದ ಹುದ್ದೆಗಳ ಪಟ್ಟಿಯನ್ನು ಗರಿಷ್ಠ ಮೂರು ವರ್ಷಗಳಿಗೆ ಮೀರದ ಅಂತರದ ಅವಧಿಯಲ್ಲಿ ತಂತ್ರಜ್ಞಾನದಲ್ಲಾದ ಬೆಳವಣಿಗೆಗಳನ್ನು ಪರಿಗಣಿಸಿ ಪರಿಷ್ಕರಿಸಬೇಕಾಗಿರುವುದರಿಂದ;

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ರ ಸೆಕ್ಷನ್ 32ರ ಉಪ ಸೆಕ್ಷನ್ (ಎ) ಮತ್ತು (ಬಿ)ಯನ್ನು ಕರ್ನಾಟಕ ಸಿವಿಲ್ ಸೇವಾ

(ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9(1ಎ)ರೊಡನೆ ಓದಿಕೊಂಡಂತೆ, ಇದರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರಾಜ್ಯ ಸರ್ಕಾರ ಈ ಮೂಲಕ ಕೆಳಗೆ ನಮೂದಿಸಿರುವ ಪರಿಶಿಷ್ಟದ ಕಲಂ 2ರಲ್ಲಿ ಇಲಾಖೆಗಳನ್ನು ಮತ್ತು ಕಲಂ 3, 4 ಮತ್ತು 5ರ ಶೀರ್ಷಿಕೆಯಲ್ಲಿ ನಿರ್ದಿಷ್ಟಪಡಿಸಿದ ಅಂಗವಿಕಲರಿಂದ ಭರ್ತಿ ಮಾಡಬಹುದಾದ ಹುದ್ದೆಗಳನ್ನು ಗುರುತಿಸಲಾಗಿದೆ.

ಪರಿಶಿಷ್ಟ

ಕ್ರ ಸಂ.	ಇಲಾಖೆಯ ಹೆಸರು	ಅಂಧತೆ ಅಥವಾ ದೃಷ್ಟಿಮಾಂದ್ಯತೆ	ಶ್ರವಣ ದೋಷ	ಚಲನವಲನ ವೈಕಲ್ಯತೆ ಅಥವಾ ಸೆರೆಬ್ರಲ್ ಪಾಲ್ಸಿ
1	2	3	4	5
1	ಕೃಷಿ ಮಾರುಕಟ್ಟೆ	ಜಿಲ್ಲಾ ಮಾರುಕಟ್ಟೆ ಅಧಿಕಾರಿ (ಸಹಾಯಕ ನಿರ್ದೇಶಕರು) ಕೃಷಿ ಮಾರುಕಟ್ಟೆ (ಸಮೂಹ–ಬಿ)	ಜಿಲ್ಲಾ ಮಾರುಕಟ್ಟೆ ಅಧಿಕಾರಿ (ಸಹಾಯಕ ನಿರ್ದೇಶಕರು) ಕೃಷಿ ಮಾರುಕಟ್ಟೆ (ಸಮೂಹ–ಬಿ)	ಜಿಲ್ಲಾ ಮಾರುಕಟ್ಟೆ ಅಧಿಕಾರಿ (ಸಹಾಯಕ ನಿರ್ದೇಶಕರು) ಕೃಷಿ ಮಾರುಕಟ್ಟೆ) (ಸಮೂಹ–ಬಿ)
2	ಸಾರ್ವಜನಿಕ ಶಿಕ್ಷಣ	ಪ್ರೌಢಶಾಲಾ ಮುಖ್ಯ ಉಪಾಧ್ಯಾಯರು (ಸಮೂಹ–ಬಿ) (ದೃಷ್ಟಿ ಮಾಂದ್ಯತೆಗೆ ಮಾತ್ರ)	1) ಪ್ರೌಢಶಾಲಾ ಮುಖ್ಯ ಉಪಾಧ್ಯಾಯರು (ಸಮೂಹ–ಬಿ) 2) ಸಹಾಯಕ ನಿರ್ದೇಶಕರು, ತಾಂತ್ರಿಕ, ಮುದ್ರಣ, ಲೇಖನ ಮತ್ತು ಪ್ರಕಟಣೆಗಳು (ಸಮೂಹ–ಬಿ)	ಪ್ರೌಢಶಾಲಾ ಮುಖ್ಯ ಉಪಾಧ್ಯಾಯರು (ಸಮೂಹ–ಬಿ)
3.	ಪದವಿ ಪೂರ್ವ ಶಿಕ್ಷಣ	ಉಪನ್ಯಾಸಕರು (ಸಮೂಹ–ಬಿ)	ಉಪನ್ಯಾಸಕರು (ಸಮೂಹ–ಬಿ)	ಉಪನ್ಯಾಸಕರು (ಸಮೂಹ–ಬಿ)
4.	ಕಾಲೇಜು ಶಿಕ್ಷಣ	ಉಪನ್ಯಾಸಕರು (ಸಮೂಹ–ಬಿ)	ಉಪನ್ಯಾಸಕರು (ಸಮೂಹ–ಬಿ)	ಉಪನ್ಯಾಸಕರು (ಸಮೂಹ–ಬಿ)
5.	ಗ್ರಂಥಾಲಯ ಇಲಾಖೆ	ಮುಖ್ಯ ಗ್ರಂಥಾಧಿಕಾರಿ (ಸಮೂಹ–ಬಿ)	ಮುಖ್ಯ ಗ್ರಂಥಾಧಿಕಾರಿ (ಸಮೂಹ–ಬಿ)	ಮುಖ್ಯ ಗ್ರಂಥಾಧಿಕಾರಿ (ಸಮೂಹ–ಬಿ)
6.	ತಾಂತ್ರಿಕ ಶಿಕ್ಷಣ	ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಉಪನ್ಯಾಸಕರು (ಸಮೂಹ–ಬಿ)	ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಉಪನ್ಯಾಸಕರು (ಸಮೂಹ–ಬಿ)	ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಉಪನ್ಯಾಸಕರು (ಸಮೂಹ–ಬಿ)
7.	ಆಹಾರ ಮತ್ತು ನಾಗರಿಕ ಸರಬರಾಜು	ಸಹಾಯಕ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು (ಸಮೂಹ–ಬಿ)	ಸಹಾಯಕ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು (ಸಮೂಹ–ಬಿ)	ಸಹಾಯಕನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು (ಸಮೂಹ–ಬಿ)

ಕ್ರ ಸಂ.	ಇಲಾಖೆಯ ಹೆಸರು	ಅಂಧತೆ ಅಥವಾ ದೃಷ್ಟಿಮಾಂದ್ಯತೆ	ಶ್ರವಣ ದೋಷ	ಚಲನವಲನ ವೈಕಲ್ಯತೆ ಅಥವಾ ಸೆರೆಬ್ರಲ್ ಪಾಲ್ಸಿ
1	2	3	4	5
8.	ಕಾನೂನು ಮಾಪನಶಾಸ್ತ್ರ	ಸಹಾಯಕನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ (ಸಮೂಹ–ಬಿ)	ಸಹಾಯಕನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ (ಸಮೂಹ–ಬಿ)	ಸಹಾಯಕನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ (ಸಮೂಹ–ಬಿ)
9.	ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ			1) ಸಿಸ್ಟಂ ಅನಾಲಿಸ್ಟ್ ಮತ್ತು ಸೀನಿಯರ್ ಪ್ರೋಗ್ರಾಮರ್ (ಸಮೂಹ–ಎ) 2) ಜೂನಿಯರ್ ಪ್ರೋಗ್ರಾಮರ್ ಮತ್ತು ಪ್ರೋಗ್ರಾಮಿಂಗ್ ಅಸಿಸ್ಟೆಂಟ್ (ಸಮೂಹ–ಬಿ)
10.	ಕ್ರೀಡಾ ಮತ್ತು ಯುವಜನ ಸೇವೆಗಳು	ಉಪ ನಿರ್ದೇಶಕರು, ಕ್ರೀಡಾ ಮತ್ತು ಯುವಜನ ಸೇವೆಗಳು (ಸಮೂಹ–ಬಿ)	1) ಉಪ ನಿರ್ದೇಶಕರು, ಕ್ರೀಡಾ ಮತ್ತು ಯುವಜನ ಸೇವೆಗಳು (ಸಮೂಹ–ಬಿ) 2) ಸಹಾಯಕ ನಿರ್ದೇಶಕರು, ಕ್ರೀಡಾ ಮತ್ತು ಯುವಜನ ಸೇವೆಗಳು (ಸಮೂಹ–ಬಿ)	ಉಪ ನಿರ್ದೇಶಕರು, ಕ್ರೀಡಾ ಮತ್ತು ಯುವಜನ ಸೇವೆಗಳು (ಸಮೂಹ–ಬಿ)
11.	ವಾರ್ತಾ ಮತ್ತು ಪ್ರಚಾರ	1) ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿ (ಸಮೂಹ–ಬಿ) 2) ಸಹಾಯಕ ವಾರ್ತಾ ಮತ್ತು ಪ್ರಚಾರ ಅಧಿಕಾರಿ (ಸಮೂಹ–ಬಿ)	1) ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿ (ಸಮೂಹ–ಬಿ) 2) ಸಹಾಯಕ ವಾರ್ತಾ ಮತ್ತು ಪ್ರಚಾರ ಅಧಿಕಾರಿ (ಸಮೂಹ–ಬಿ)	1) ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿ (ಸಮೂಹ–ಬಿ) 2) ಸಹಾಯಕ ವಾರ್ತಾ ಮತ್ತು ಪ್ರಚಾರ ಅಧಿಕಾರಿ (ಸಮೂಹ–ಬಿ)
12.	ರಾಜ್ಯ ಪತ್ರಾಗಾರ		ಸಹಾಯಕ ಪತ್ರಪಾಲಕರು (ಸಮೂಹ–ಬಿ)	ಸಹಾಯಕ ಪತ್ರಪಾಲಕರು (ಸಮೂಹ–ಬಿ)
13.	ಕರ್ನಾಟಕ ಸರ್ಕಾರ ಸಚಿವಾಲಯ		ಶಾಖಾಧಿಕಾರಿ (ಸಮೂಹ–ಬಿ)	ಶಾಖಾಧಿಕಾರಿ (ಸಮೂಹ–ಬಿ)
14.	ಕರ್ನಾಟಕ ಸರ್ಕಾರಿ ವಿಮಾ ಇಲಾಖೆ	ಸಹಾಯಕ ನಿರ್ದೇಶಕರು/ ಜಿಲ್ಲಾ ವಿಮಾ ಅಧಿಕಾರಿ (ಸಮೂಹ–ಬಿ)	ಸಹಾಯಕ ನಿರ್ದೇಶಕರು/ ಜಿಲ್ಲಾ ವಿಮಾ ಅಧಿಕಾರಿ (ಸಮೂಹ–ಬಿ)	ಸಹಾಯಕ ನಿರ್ದೇಶಕರು/ ಜಿಲ್ಲಾ ವಿಮಾ ಅಧಿಕಾರಿ (ಸಮೂಹ–ಬಿ)

ಕ್ರ ಸಂ.	ಇಲಾಖೆಯ ಹೆಸರು	ಅಂಧತೆ ಅಥವಾ ದೃಷ್ಟಿಮಾಂದ್ಯತೆ	ಶ್ರವಣ ದೋಷ	ಚಲನವಲನ ವೈಕಲ್ಯತೆ ಅಥವಾ ಸೆರೆಬ್ರಲ್ ಪಾಲ್ಸಿ
1	2	3	4	5
15.	ಲೋಕೋಪಯೋಗಿ ಇಲಾಖೆ	---	ಸಹಾಯಕ ಅಭಿಯಂತರರು (ಸಮೂಹ–ಬಿ)	ಸಹಾಯಕ ಅಭಿಯಂತರರು (ಸಮೂಹ–ಬಿ)
16.	ಕಂದಾಯ ಇಲಾಖೆ	ತಹಸೀಲ್ದಾರ್ (ಸಮೂಹ–ಬಿ)	ತಹಸೀಲ್ದಾರ್ (ಸಮೂಹ–ಬಿ)	---
17.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	1) ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ (ಸಮೂಹ–ಎ) 2) ಅಪರಾಧಿಗಳ ಮೇಲ್ವಿಚಾರಣಾಧಿಕಾರಿ ಗ್ರೇಡ್–1 (ಸಮೂಹ–ಬಿ) 3) ಸಹಾಯಕ ನಿರ್ದೇಶಕರು, (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ) (ಸಮೂಹ–ಬಿ)	1) ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ (ಸಮೂಹ–ಎ) 2) ಅಪರಾಧಿಗಳ ಮೇಲ್ವಿಚಾರಣಾಧಿಕಾರಿ ಗ್ರೇಡ್–1 (ಸಮೂಹ–ಬಿ) 3) ಸಹಾಯಕ ನಿರ್ದೇಶಕರು, (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ) (ಸಮೂಹ–ಬಿ)	1) ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ (ಸಮೂಹ–ಎ)
18	ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ	ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ (ಸಮೂಹ–ಬಿ)	ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ (ಸಮೂಹ–ಬಿ)	ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ (ಸಮೂಹ–ಬಿ)
19	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	1) ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ (ಸಮೂಹ–ಎ) 3) ಸಹಾಯಕ ಪೌಷ್ಟಿಕಾಂಶ ಅಧಿಕಾರಿ (ಸಮೂಹ–ಬಿ) 4) ಸಹಾಯಕ ಶುಶ್ರೂಷಕ ಪ್ರಾಧ್ಯಾಪಕರು (ಸಮೂಹ–ಎ)	1) ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ (ಸಮೂಹ–ಎ) 2) ದಂತ ಆರೋಗ್ಯ ಅಧಿಕಾರಿ (ಸಮೂಹ–ಎ) 3) ಸಹಾಯಕ ಪೌಷ್ಟಿಕಾಂಶ ಅಧಿಕಾರಿ (ಸಮೂಹ–ಬಿ) 4) ಸಹಾಯಕ ಶುಶ್ರೂಷಕ ಪ್ರಾಧ್ಯಾಪಕರು (ಸಮೂಹ–ಎ)	1) ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ (ಸಮೂಹ–ಎ) 3) ಸಹಾಯಕ ಪೌಷ್ಟಿಕಾಂಶ ಅಧಿಕಾರಿ (ಸಮೂಹ–ಬಿ) 4) ಸಹಾಯಕ ಶುಶ್ರೂಷಕ ಪ್ರಾಧ್ಯಾಪಕರು (ಸಮೂಹ–ಎ)

ಕ್ರ ಸಂ.	ಇಲಾಖೆಯ ಹೆಸರು	ಅಂಧತೆ ಅಥವಾ ದೃಷ್ಟಿಮಾಂದ್ಯತೆ	ಶ್ರವಣ ದೋಷ	ಚಲನವಲನ ವೈಕಲ್ಯತೆ ಅಥವಾ ಸೆರೆಬ್ರಲ್ ಪಾಲ್ಸಿ
1	2	3	4	5
		5) ಜೀವ–ರಸಾಯನಶಾಸ್ತ್ರಜ್ಞ (ಸಮೂಹ–ಎ)	5) ಜೀವ–ರಸಾಯನಶಾಸ್ತ್ರಜ್ಞ (ಸಮೂಹ–ಎ)	5) ಜೀವ–ರಸಾಯನಶಾಸ್ತ್ರಜ್ಞ (ಸಮೂಹ–ಎ)
		6) ಮಾನಸಿಕ ಸಾಮಾಜಿಕ ಕಾರ್ಯಕರ್ತರು (ಸಮೂಹ–ಬಿ)	6) ಮಾನಸಿಕ ಸಾಮಾಜಿಕ ಕಾರ್ಯಕರ್ತರು (ಸಮೂಹ–ಬಿ)	6) ಮಾನಸಿಕ ಸಾಮಾಜಿಕ ಕಾರ್ಯಕರ್ತರು (ಸಮೂಹ–ಬಿ)
		7) ಮನಶಾಸ್ತ್ರಜ್ಞರು (ಸಮೂಹ–ಬಿ)	7) ಮನಶಾಸ್ತ್ರಜ್ಞರು (ಸಮೂಹ–ಬಿ)	7) ಮನಶಾಸ್ತ್ರಜ್ಞರು (ಸಮೂಹ–ಬಿ)
		8) ಕಿರಿಯ ಭೌತಶಾಸ್ತ್ರ ತಜ್ಞ (ಸಮೂಹ–ಬಿ)	8) ಕಿರಿಯ ಭೌತಶಾಸ್ತ್ರ ತಜ್ಞ (ಸಮೂಹ–ಬಿ)	8) ಕಿರಿಯ ಭೌತಶಾಸ್ತ್ರ ತಜ್ಞ (ಸಮೂಹ–ಬಿ)
		9) ಪದವೀಧರ ಔಷಧ ತಜ್ಞರು (ಸಮೂಹ–ಬಿ)	9) ಪದವೀಧರ ಔಷಧ ತಜ್ಞರು (ಸಮೂಹ–ಬಿ)	9) ಪದವೀಧರ ಔಷಧ ತಜ್ಞರು (ಸಮೂಹ–ಬಿ)
			10) ಸೂಕ್ಷ್ಮ ಜೀವಿಶಾಸ್ತ್ರಜ್ಞ (ಸಮೂಹ–ಬಿ)	
		11) ಕೀಟ ಶಾಸ್ತ್ರಜ್ಞ (ಸಮೂಹ–ಬಿ)	11) ಕೀಟ ಶಾಸ್ತ್ರಜ್ಞ (ಸಮೂಹ–ಬಿ)	11) ಕೀಟ ಶಾಸ್ತ್ರಜ್ಞ (ಸಮೂಹ–ಬಿ)
		12) ಕಿರಿಯ ರಸಾಯನ ಶಾಸ್ತ್ರಜ್ಞ (ಸಮೂಹ–ಬಿ)	12) ಕಿರಿಯ ರಸಾಯನ ಶಾಸ್ತ್ರಜ್ಞ (ಸಮೂಹ–ಬಿ)	12) ಕಿರಿಯ ರಸಾಯನ ಶಾಸ್ತ್ರಜ್ಞ (ಸಮೂಹ–ಬಿ)
20	ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ	2) ಉಪನ್ಯಾಸಕರು (ಸಮೂಹ–ಬಿ)	1) ವೈದ್ಯರು ದರ್ಜೆ–2 (ಸಮೂಹ–ಬಿ) 2) ಉಪನ್ಯಾಸಕರು (ಸಮೂಹ–ಬಿ)	1) ವೈದ್ಯರು ದರ್ಜೆ–2 (ಸಮೂಹ–ಬಿ) 2) ಉಪನ್ಯಾಸಕರು (ಸಮೂಹ–ಬಿ)
21	ಔಷಧ ನಿಯಂತ್ರಣ ಇಲಾಖೆ	ಕಿರಿಯ ರಸಾಯನಶಾಸ್ತ್ರಜ್ಞ (ಸಮೂಹ–ಬಿ)	ಕಿರಿಯ ರಸಾಯನಶಾಸ್ತ್ರಜ್ಞ (ಸಮೂಹ–ಬಿ)	ಕಿರಿಯ ರಸಾಯನಶಾಸ್ತ್ರಜ್ಞ (ಸಮೂಹ–ಬಿ)
22	ಜಲಸಂಪನ್ಮೂಲ ಇಲಾಖೆ	---	ಸಹಾಯಕ ಅಭಿಯಂತರರು (ಸಮೂಹ–ಬಿ)	ಸಹಾಯಕ ಅಭಿಯಂತರರು (ಸಮೂಹ–ಬಿ)

ಕ್ರ ಸಂ.	ಇಲಾಖೆಯ ಹೆಸರು	ಅಂಧತೆ ಅಥವಾ ದೃಷ್ಟಿಮಾಂದ್ಯತೆ	ಶ್ರವಣ ದೋಷ	ಚಲನವಲನ ವೈಕಲ್ಯತೆ ಅಥವಾ ಸೆರೆಬ್ರಲ್ ಪಾಲ್ಸಿ
1	2	3	4	5
23	ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ	--	ಸಹಾಯಕ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ (ಸಮೂಹ-ಬಿ)	----
24	ಸಿಆಸುಇ (ಸೇವೆಗಳು)	---	ಕೆ.ಎ.ಎಸ್. (ಸಮೂಹ-ಎ) (ಕಿರಿಯ ಶ್ರೇಣಿ)	ಕೆ.ಎ.ಎಸ್. (ಸಮೂಹ-ಎ) (ಕಿರಿಯ ಶ್ರೇಣಿ)
25	ಭಾಷಾಂತರ ನಿರ್ದೇಶನಾಲಯ	--	--	ಭಾಷಾಂತರಕಾರರು (ಕನ್ನಡ) (ಸಮೂಹ-ಬಿ)
26	ತೋಟಗಾರಿಕೆ ಇಲಾಖೆ	1) ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು (ಸಮೂಹ-ಎ) 2) ಸಹಾಯಕ ತೋಟಗಾರಿಕಾ ಅಧಿಕಾರಿ (ಸಮೂಹ-ಬಿ) 3) ಸಹಾಯಕ ತೋಟಗಾರಿಕಾ ನಿರ್ದೇಶಕರು (ಸಮೂಹ-ಬಿ)	1) ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು (ಸಮೂಹ-ಎ) 2) ಸಹಾಯಕ ತೋಟಗಾರಿಕಾ ಅಧಿಕಾರಿ (ಸಮೂಹ-ಬಿ) 3) ಸಹಾಯಕ ತೋಟಗಾರಿಕಾ ನಿರ್ದೇಶಕರು (ಸಮೂಹ-ಬಿ)	1) ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು (ಸಮೂಹ-ಎ) 2) ಸಹಾಯಕ ತೋಟಗಾರಿಕಾ ಅಧಿಕಾರಿ (ಸಮೂಹ-ಬಿ) 3) ಸಹಾಯಕ ತೋಟಗಾರಿಕಾ ನಿರ್ದೇಶಕರು (ಸಮೂಹ-ಬಿ)
27	ವಾಣಿಜ್ಯ ತೆರಿಗೆ ಇಲಾಖೆ	ವಾಣಿಜ್ಯ ತೆರಿಗೆ ಅಧಿಕಾರಿ (ಸಮೂಹ-ಬಿ) (ದೃಷ್ಟಿಮಾಂದ್ಯತೆಗೆ ಮಾತ್ರ)	ವಾಣಿಜ್ಯ ತೆರಿಗೆ ಅಧಿಕಾರಿ (ಸಮೂಹ-ಬಿ)	ವಾಣಿಜ್ಯ ತೆರಿಗೆ ಅಧಿಕಾರಿ (ಸಮೂಹ-ಬಿ)
28	ಖಜಾನೆ ಇಲಾಖೆ	ಸಹಾಯಕ ಖಜಾನೆ ನಿರ್ದೇಶಕರು (ಸಮೂಹ-ಬಿ) (ದೃಷ್ಟಿಮಾಂದ್ಯತೆಗೆ ಮಾತ್ರ)	ಸಹಾಯಕ ಖಜಾನೆ ನಿರ್ದೇಶಕರು (ಸಮೂಹ-ಬಿ)	ಸಹಾಯಕ ಖಜಾನೆ ನಿರ್ದೇಶಕರು (ಸಮೂಹ-ಬಿ)
29	ಸಮಾಜ ಕಲ್ಯಾಣ ಇಲಾಖೆ	ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ (ಸಮೂಹ-ಬಿ)	ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ (ಸಮೂಹ-ಬಿ)	ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ (ಸಮೂಹ-ಬಿ)

ಕ್ರ ಸಂ.	ಇಲಾಖೆಯ ಹೆಸರು	ಅಂಧತೆ ಅಥವಾ ದೃಷ್ಟಿಮಾಂದ್ಯತೆ	ಶ್ರವಣ ದೋಷ	ಚಲನವಲನ ವೈಕಲ್ಯತೆ ಅಥವಾ ಸೆರೆಬ್ರಲ್ ಪಾಲ್ಸಿ
1	2	3	4	5
30	ಪೌರಾಡಳಿತ ನಿರ್ದೇಶನಾಲಯ	ಮುಖ್ಯಾಧಿಕಾರಿ (ದರ್ಜೆ–1) (ಸಮೂಹ–ಬಿ)	ಮುಖ್ಯಾಧಿಕಾರಿ (ದರ್ಜೆ–1) (ಸಮೂಹ–ಬಿ)	ಮುಖ್ಯಾಧಿಕಾರಿ (ದರ್ಜೆ–1) (ಸಮೂಹ- ಬಿ)
31	ನಗರ ಯೋಜನೆ ನಿರ್ದೇಶನಾಲಯ	ಕಿರಿಯ ನಗರ ಯೋಜಕರು (ಸಮೂಹ–ಬಿ)	ಕಿರಿಯ ನಗರ ಯೋಜಕರು (ಸಮೂಹ–ಬಿ)	ಕಿರಿಯ ನಗರ ಯೋಜಕರು (ಸಮೂಹ–ಬಿ)

ಟಿಪ್ಪಣಿ : ಈ ಹುದ್ದೆಗಳನ್ನು ವೈದ್ಯಕೀಯ ಪರಿವೀಕ್ಷಕರು ಹುದ್ದೆಗಳ ಕರ್ತವ್ಯವನ್ನು ನಿರ್ವಹಿಸಲು ಅರ್ಹರಾಗಿರುತ್ತಾರೆಂದು ನೀಡುವ ಪ್ರಮಾಣ ಪತ್ರದ ಷರತ್ತಿಗೆ ಒಳಪಡಿಸಿ ಅಂಗವಿಕಲರಿಗಾಗಿ ಗುರುತಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ದೇವರಾಜು
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು–1)

Personnel & Administrative Reforms Secretariat

NOTIFICATION

No. DPAR 21 SRR 2008, Bangalore, Dated: 3rd August, 2009

Whereas Rule 9(1A) of the Karnataka Civil Services (General Recruitment) Rules, 1977 provides for three percent reservation (horizontal reservation) in recruitment for Group 'A' and 'B' posts for persons with disabilities;

Whereas as per Section 32 of the Persons With Disabilities (Equal Opportunities, Protection of Rights and Full Participation) Act, 1995 the State Government has to identify category of posts which can be reserved for persons with disabilities in Government Departments.

Whereas in exercise of the powers conferred by sub-section (1) of section 32 of the Persons With Disabilities (Equal Opportunities, Protection of Rights and Full Participation) Act, 1995 (Central Act of 1996) and Rule 9(1A) of the Karnataka Civil Services (General Recruitment) Rules, 1977 the Government of Karnataka identified the posts for physically handicapped persons in Notification No. DPAR 104 SRR 2005, dated 13.9.2005.

Whereas as per Section 32 (b) of the Persons With Disabilities (Equal Opportunities, Protection of Rights and Full Participation) Act, 1995 (Central Act of 1996) the State Government shall at periodical intervals not exceeding three years, review the list of posts identified and update the list taking into consideration the developments in technology.

Now, therefore, in exercise of the powers conferred by sub-section (a) and (b) of section 32 of the Persons With Disabilities (Equal Opportunities, Protection of Rights and Full Participation) Act, 1995 (Central Act of 1996) and Rule 9(1A) of the Karnataka Civil Services (General Recruitment) Rules, 1977 the Government of Karnataka hereby identifies the posts specified in Col. 3, 4, and 5 of the Schedule below in respect of the category of the disabled persons specified in the headings of the respective columns in the Departments specified in col.(2) thereof.

SCHEDULE

Sl. No.	Name of the Department	Blindness or low vision	Hearing impairment	Locomotor disability or cerebral palsy
1	2	3	4	5
1.	Agricultural Marketing	Dist. Marketing Officer (Asst. Dir) Agrl. Mktg., (Group-B)	Dist. Marketing Officer (Asst. Dir) Agrl. Mktg., (Group-B)	Dist. Marketing Officer (Asst. Dir) Agrl. Mktg., (Group-B)
2.	Public Instruction	Head Master of High School (Group'B') (low vision only)	1) Head Master of High School (Group'B') 2) Assistant Director, Technical Printing, Stationary and Publications (Group-B)	Head Master of High School (Group'B')
3.	Pre-University Education	Lecturer (Group 'B')	Lecturer (Group 'B')	Lecturer (Group 'B')

Sl. No.	Name of the Department	Blindness or low vision	Hearing impairment	Locomotor disability or cerebral palsy
1	2	3	4	5
4.	Collegiate Education	Lecturer (Group-B)	Lecturer (Group-B)	Lecturer (Group-B)
5.	Deptt. of Library	Chief Librarian (Group-'B')	Chief Librarian (Group-'B')	Chief Librarian (Group-'B')
6.	Technical Education	Lecturer in Polytechnics and Engineering Colleges (Group-B)	Lecturer in Polytechnics and Engineering Colleges (Group-B)	Lecturer in Polytechnics and Engineering Colleges (Group-B)
7.	Food & Civil Supplies	Asst. Dir. of Food & Civil Supplies (Group-'B')	Asst. Dir. of Food & Civil Supplies (Group-'B')	Asst. Dir. of Food & Civil Supplies (Group-'B')
8.	Legal Metrology	Asst. Controller-Legal Metrology (Group-'B')	Asst. Controller-Legal Metrology (Group-'B'	Asst. Controller-Legal Metrology (Group-'B')
9.	Information Technology & Bio-Technology			1) System Analyst and Senior Programmer (Group 'A') 2) Junior Programmer and Programming Assistant (Group -'B')
10.	Sports & Youth Services	Dy. Dir., Sports & & Youth Services (Group-'B')	1) Dy. Dir., Sports & Youth Services (Group-'B') 2) Assistant Director, Sports & Youth Services (Group-B)	Dy. Dir., Sports & Youth Services (Group-'B')
11.	Information & Publicity	1) Dist. Information & Publicity Officer (Group 'B') 2) Asst. Information & & Publicity Officer (Group 'B')	1) Dist. Information & Publicity Officer (Group 'B') 2) Asst. Information & Publicity Officer (Group 'B')	1)Dist. Information & Publicity Officer (Group 'B') 2) Asst. Information & & Publicity Officer (Group 'B')
12.	State Archives	-	Asst. Archivist (Group-'B')	Asst. Archivist (Group-'B')
13.	Karnataka Govt. Secretariat	-	Section Officer (Group-'B')	Section Officer (Group-'B')

Sl. No.	Name of the Department	Blindness or low vision	Hearing impairment	Locomotor disability or cerebral palsy
1	2	3	4	5
14.	Karnataka Govt., Insurance Department	Assistant Director/Dist. Insurance Officer (Group 'B')	Assistant Director/Dist. Insurance Officer (Group 'B')	Assistant Director/Dist. Insurance Officer (Group-B)
15.	Public Works Department	-- -	Asst. Engineer (Group 'B')	Asst. Engineer (Group 'B')
16.	Revenue Department	Tahsildar (Group-'B')	Tahsildar (Group-'B')	---
17.	Women & Child Development	1)District disabled Welfare Officer (Group-A) 2) Probation Officer Grade-I (Group-'B') 3) Assistant Director (Women and Child Development) (Group-B)	1) District disabled Welfare Officer (Group-A) 2) Probation Officer Grade-I (Group-'B') 3) Assistant Director (Women and Child Development) (Group-B)	District disabled Welfare Officer (Group-A)
18.	Disabled and Senior Citizen's Welfare	Dist. Disabled Welfare Officer (Group-B)	Dist. Disabled Welfare Officer (Group-B)	Dist. Disabled Welfare Officer (Group-B)
19.	Health & Family Welfare Services	(1) General Duty Medical Officer (Group-A) (3)Asst. Nutrition Officer (Group-B) (4)Asst. Professor of Nursing (Group-A) 5) Bio-Chemist (Group-A) (6)Psychiatric Social Worker (Group-B)	1) General Duty Medical Officer (Group-A) 2) Dental Health Officer(Group-A) 3) Asst. Nutrition Officer (Group-B) (4)Asst. Professor of Nursing (Group-A) 5) Bio-Chemist (Group-A) 6) Psychiatric Social Worker (Group-B)	1) General Duty Medical Officer (Group-A) 3) Asst. Nutrition Officer (Group-B) (4)Asst. Professor of Nursing (Group-A) 5) Bio-Chemist (Group-A) 6) Psychiatric Social Worker (Group-B)

Sl. No.	Name of the Department	Blindness or low vision	Hearing impairment	Locomotor disability or cerebral palsy
1	2	3	4	5
		(7) Psychologist (Group-B) (8) Junior Physicist (Group-B) (9) Graduate Pharmacist (Group-B) 11)Entomologist (Group-B) (12) Jr. Chemist (Group-B)	7) Psychologist (Group-B) 8) Junior Physicist (Group-B) 9) Graduate Pharmacist (Group-B) 10) Micro biologist (Group-B) 11) Entomologist (Group-B) 12) Jr. Chemist (Group-B)	7) Psychologist (Group-B) 8) Junior Physicist (Group-B) 9) Graduate Pharmacist (Group-B) 11) Entomologist (Group-B) 12) Jr. Chemist (Group-B)
20.	Indian Systems of Medicine and Homoeopathy	(2) Lecturer (Group-B)	1) Physician Grade-II (Group-B) 2) Lecturer (Group-B)	1) Physician Grade-II (Group-B) 2) Lecturer (Group-B)
21.	Drugs Control Department	Jr. Chemist (Group-B)	Jr. Chemist (Group-B)	Jr. Chemist (Group-B)
22.	Water Resources Department	-- --	Assistant Engineer (Group-B)	Assistant Engineer (Group-B)
23.	Department of Economics and Statistics	---	Assistant Director, (Economics and Statistics) (Group-B)	---
24.	DPAR (Services)	----	K.A.S. (Group-A) (Junior Scale)	K.A.S. (Group-A) (Junior Scale)
25.	Directorate of Translation	---	---	Translator (Kannada) (Group-B)
26.	Horticulture Department	1) Senior Assistant Director of Horticulture (Group-A)	1) Senior Assistant Director of Horticulture (Group-A)	1) Senior Assistant Director of Horticulture (Group-A)

Sl. No.	Name of the Department	Blindness or low vision	Hearing impairment	Locomotor disability or cerebral palsy
1	2	3	4	5
		2) Assistant Horticulture Officer (Group-B) 3) Assistant Director of Horticulture (Group-B)	2) Assistant Horticulture Officer (Group-B) 3) Assistant Director of Horticulture (Group-B)	2) Assistant Horticulture Officer (Group-B) 3) Assistant Director of Horticulture (Group-B)
27.	Commercial Tax Department	Commercial Tax Officer (Group-B) (Low vision only)	Commercial Tax Officer (Group-B)	Commercial Tax Officer (Group-B)
28.	Department of Treasuries	Assistant Director of Treasury (Group-B) (Low vision only)	Assistant Director of Treasury (Group-B)	Assistant Director of Treasury (Group-B)
29	Social Welfare Department	Taluk Social Welfare Officer (Group-B)	Taluk Social Welfare Officer (Group-B)	Taluk Social Welfare Officer (Group-B)
30	Directorate of Municipal Administration	Chief Officer (Grade-I) (Group-B)	Chief Officer (Grade-I) (Group-B)	Chief Officer (Grade-I) (Group-B)
31	Directorate of Town Planning	Junior Town Planner (Group-B)	Junior Town Planner (Group-B)	Junior Town Planner (Group-B)

NOTE: These posts are identified for Persons with Disabilities subject to Fitness Certificate issued by the Medical Supervisors to perform the job.

By Order and in the name of the Governor of Karnataka

DEVARAJU
Under Secretary to Government,
Department of Personnel &
Administrative Reforms
(Service Rules-1)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು.

Karnataka Government Secretariat,
Multi Store Building,
Bangalore, Date:13.03.2018

NOTIFICATION

In exercise of the powers conferred under Sub-section (1) of section 32 of the Person with Disabilities (equal Opportunities, Protection of Rights and Full Participation) Act 1995, the Government of Karnataka hereby identifies the post specified in Col. 3,4, & 5 of the Schedule below in respect of the category "A&B" Posts of the disable persons in **Labour Department.**

SCHEDULE-I

Sl. No.	Blindness or Low Vision	Hearing Impairment	Leprosy Cured	Loco motor Disability of Cerebral palsy	Mentally Ill
1.	Asst. Labour Commissioner (Group-A)	Asst. Labour Commissioner (Group-A)	Asst. Labour Commissioner (Group-A)	Asst. Labour Commissioner (Group-A) (OA, OL,OAL, CP(Mild))	Asst. Labour Commissioner (Group-A)
2.	Labour Officer (Group-B)	Labour Officer (Group-B)	Labour Officer (Group-B)	Labour Officer (Group-B) (OA, OL, OAL, CP(Mild))	Labour Officer (Group-B)

NOTIFICATION

In exercise fo the powers conferred under Sub-section(1) of section 32 of the Person with Disabilities (equal Opportunities, Protection of Rights and Full Participation) Act 1995, the Government of Karnataka hereby identifies the post specified in Col. 3, 4, 5, 6, 7, 8 & 9 of the Schedule below in respect of the category "C & D" Posts of the disable persons in **Labour Department.**

SCHEDULE-II

Sl. No	Blind	Low Vision	Leprosy Cured	Hearing Impairment	Locomotor Disability	Mentally Ill	Mentally Retarded
1	2	3	4	5	6	7	8
1	Labour Inspector (Group-C)	Labour Inspector (Group-C)	Labour Inspector (Group-C)	Labour Inspector (Group-C)	Labour Inspector (Group-C) (OA,OL, OAL, CP(Mild))	Labour Inspector (Group-C)	--
2	First Division Asst. (Group-C)	First Division Asst. (Group-C)	First Division Asst. (Group-C)	First Division Asst. (Group-C)	First Division Asst. (Group-C) (OA, OL, OAL, CP (Mild))	First Division Asst. (Group-C)	--

Sl. No	Blind	Low Vision	Leprosy Cured	Hearing Impairment	Locomotor Disability	Mentally Ill	Mentally Retarded
1	2	3	4	5	6	7	8
3	Second Division Asst. (Group-C)	Second Division Asst. (Group-C)	Second Division Asst. (Group-C)	Second Division Asst. (Group-C)	Second Division Asst. (Group-C) (OA, OL, OAL, CP (Mild))	Second Division Asst. (Group-C)	--
4	Literate Attender (Group-D)	Literate Attender (Group-D)	Literate Attender (Group-D)	Literate Attender (Group-D)	Literate Attender (Group-D) (OA, OL, OAL, CP (Mild))	Literate Attender (Group-D)	Literate Attender (Group-D)
5	Peon (Group-D)	Peon (Group-D)	Peon (Group-D)	Peon (Group-D)	Peon (Group-D) (OA, OL, OAL, CP (Mild))	Peon (Group-D)	Peon (Group-D)
6	Jamedar (Group-D)	Jamedar (Group-D)	Jamedar (Group-D)	Jamedar (Group-D)	Jamedar (Group-D) (OA, OL, OAL, CP (Mild))	Jamedar (Group-D)	Jamedar (Group-D)

This Order is issued as per the DPAR Services Rules-1 vide Order No. DPAR 273 SeNaNi 13 Dated: 13/03/2015.

By Order and in the name of the
Governor of Karnataka

(JAYALAKSHMI)
Under Secretary to Government-2,
Department of Women & Child Development &
Empowerment of Differently Abled and Senior Citizens.

The Compiler, Karnataka Gazette, Bangalore for publication in the Extra-ordinary Gazette and to supply 50 copies to Department of Women & Child Development & Empowerment of Differently Abled and Senior Citizent, 3rd Stage, 1st Floor, M.S. Building, Bangalore.

Copy to:-

1. The Secretary, Labour Department, 1st Floor, Vikasa Soudha, Bengaluru-01.
2. The Commissioner, Labour Departmrent, Karmika Bhavan, Bannerghatta Road, Bengaluru-28.
3. The Secretary, Karnataka Public Service Commission. Udyoga Soudha, Bengaluru.
4. The Director, Empowerment of Differently Abled and Senior Citizens, V.V.Tower, Podium Block, Bengaluru.
